MS – 054

## IV Semester B.Com. Examination, May/June 2013
## (Freshers)
## (2012-13 & Onwards)
## ಕನ್ನಡ ಭಾಷಾ ಪತ್ರಿಕೆ – IV
## ಸಾಹಿತ್ಯ ಸಲ್ಲಾಪ – 2 ಮತ್ತು ವ್ಯಾವಹಾರಿಕ ಕನ್ನಡ

Time : 3 Hours | Max. Marks : 100

### ಭಾಗ – 1

### ಸಾಹಿತ್ಯ ಸಲ್ಲಾಪ – 2

I. ಈ ಪದ್ಯದ ಭಾವಾರ್ಥವನ್ನು ಬರೆಯಿರಿ : (1×5=5)

ಹೊಟ್ಟೆಯ ಮೇಲೆ ಕಟ್ಬೋಗರದ ಮೊಟ್ಟೆಯ ಕಟ್ಟಿದರೇನು ?
ಹಸಿವು ಹೋಹುದೇ ?
ಅಂಗದ ಮೇಲೆ ಲಿಂಗ ಸ್ವಾಯತವಾದರೇನು ?
ಭಕ್ತನಾಗಬಲ್ಲನೆ ?
ಇಟ್ಟಕಲ್ಲು ಮಳೆಯ ಮೇಲೆ ಸಿಕ್ಕಿದಡೆ
ಆ ಕಲ್ಲು ಲಿಂಗವೇ ? ಆ ಮಳೆ ಭಕ್ತನೆ ? ಇಟ್ಟಾತ ಗುರುವೆ ?
ಇಂತಪ್ಪರ ಕಂಡಡೆ ನಾಚುವೆನಯ್ಯ ಗುಹೇಶ್ವರ.

II. ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (3×5=15)

1) ಚನ್ನಮಲ್ಲಿಕಾರ್ಜುನನನ್ನು ಕಾಣಲು ಅಕ್ಕಮಹಾದೇವಿ ಹೇಗೆ ಹಂಬಲಿಸಿದಳು ?
2) ವಾಸ್ತವದಲ್ಲಿ ಸರೋಜಳ ಬ್ಯಾಂಕ್ ನೌಕರಿ ಕುರಿತು ಗಂಡನ ಅಭಿಪ್ರಾಯ ಏನಿತ್ತು ?
3) ಗ್ರಹಣದ ಅವಧಿಯಲ್ಲಿ ವಾಚಾಳಿ ಜ್ಯೋತಿಷಿಗಳನ್ನು ಕರೆತಂದು ಟಿ.ವಿ. ಸ್ಟುಡಿಯೋಗಳಲ್ಲಿ ಕೂರಿಸುವುದರಿಂದ ಆಗುವ ಅಪಾಯಗಳೇನು ?
4) ಮಾರ ಬಳ್ಳಿಯೊಂದನ್ನು ತೆಗೆದುಕೊಂಡು ಮರಕ್ಕೆ ಗಂಟುಹಾಕಿದ್ದೇಕೆ ?
5) ಧಾರ್ಮಿಕ ಭಯೋತ್ಪಾದಕತೆಯ ಸ್ವರೂಪವೇನು ?

P.T.O.

III. ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : (3×12=36)

1) ವಚನಗಳು ಹಲವು ಬಗೆಯ ಅನುಭವ ಮತ್ತು ಚಿಂತನೆಗಳನ್ನು ಹೇಗೆ ಕಟ್ಟಿಕೊಟ್ಟಿವೆ ?

2) ಬುದ್ಧ ಮತ್ತು ಬೆಳದಿಂಗಳ ಅವಿನಾಭಾವ ಸಂಬಂಧವನ್ನು 'ಬುದ್ಧ ಬೆಳದಿಂಗಳು' ಕವಿತೆಯ ಹಿನ್ನೆಲೆಯಲ್ಲಿ ವಿವರಿಸಿ.

3) 'ಬಿಡುಗಡೆ'ಯ ನಾಯಕಿ ಸರೋಜಳಿಗೆ ಸಿಕ್ಕ ಬಿಡುಗಡೆ ಎಂತಹದು ? ಅಲ್ಲಿಯವರೆಗೆ ಅವಳು ಅನುಭವಿಸಿದ ಸಂಕಟಗಳೇನು ?

4) ಸಮೂಹ ಮಾಧ್ಯಮಗಳ ಹೊಣೆಗೇಡಿತನವನ್ನು 'ಗ್ರಹಣಕಾಲದಲ್ಲಿ ಟಿ.ವಿ. ನೋಡುವುದು ಅಪಾಯ' ಲೇಖನ ಹೇಗೆ ಬಯಲಿಗೆಳೆದಿದೆ ?

5) ಮೂಲಿಕೆ ಬಳ್ಳಿಯ ಸುತ್ತ ಹರಡಿಕೊಂಡಿರುವ ಸ್ವಾರಸ್ಯಕರ ಸಂಗತಿಗಳೇನು ?

## ಭಾಗ – 2

## ವ್ಯಾವಹಾರಿಕ ಕನ್ನಡ

IV. ನಾಲ್ಕು ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ : (4×5=20)

1) ಕನ್ನುಡಿ ವೆಬ್‌ಸೈಟ್

2) ಸಮಿತಿ ವರದಿ

3) ಕಾರ್ಯಕ್ರಮ ಪಟ್ಟಿ

4) ಸಭೆಯ ತಿಳಿವಳಿಕೆ ಪಟ್ಟಿ

5) ಹುದ್ದೆಗಳ ಜಾಹೀರಾತು

6) ಇ-ವ್ಯವಹಾರ.

V. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. (2×12=24)

1) ಆಹ್ವಾನ ಪತ್ರಿಕೆಯ ಮುಖ್ಯ ಲಕ್ಷಣಗಳು ಯಾವುವು ? ಕಾಲೇಜಿನಲ್ಲಿ ನಡೆಯುವ ಕನ್ನಡ ರಾಜ್ಯೋತ್ಸವ ಸಮಾರಂಭದ ಆಹ್ವಾನ ಪತ್ರಿಕೆಯ ಮಾದರಿಯನ್ನು ಸಿದ್ಧಪಡಿಸಿ.

2) ಪತ್ರಿಕಾ ವರದಿ ಎಂದರೇನು ? ಅದರ ವಿವಿಧ ಬಗೆಗಳು ಯಾವುವು ? ವರದಕ್ಷಿಣೆ ಸಾವಿಗೆ ಸಂಬಂಧಿಸಿದ ತನಿಖಾ ವರದಿಯೊಂದನ್ನು ಸಿದ್ಧಪಡಿಸಿ.

3) ಟೆಂಡರ್ ಎಂದರೇನು ? ಟೆಂಡರಿನ ಪ್ರಮುಖ ಭಾಗಗಳು ಯಾವುವು ? ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಅಂಗನವಾಡಿ ಕೇಂದ್ರಗಳ 'ಶಿಕ್ಷಣ ಕಿಟ್' ಖರೀದಿಗಾಗಿ ಕರೆಯುವ ಟೆಂಡರಿನ ಮಾದರಿಯನ್ನು ಸಿದ್ಧಪಡಿಸಿ.

4) 'ಕನ್ನಡದಲ್ಲಿ ಕಂಪ್ಯೂಟರ್ ಬಳಕೆ' – ಹೇಗೆ ಆಗುತ್ತಿದೆ ? ವಿವರಿಸಿ.